# ಸ್ವಾಗತಾರ್ಹ ತೀರ್ಪು

ವರದಕ್ಷಿಣೆ ನಿಷೇಧ ಕಾಯ್ದೆ ಕುರಿತಂತೆ ಆರೋಪಿತ ಪುರುಷ ಹಾಗೂ ಅವನ ಕುಟುಂಬದ ಬಗ್ಗೆ ಸುಪ್ರೀಂ ಕೋರ್ಟ್ ತಳೆದಿರುವ ನಿಲುವು ಸ್ವಾಗತಾರ್ಹವಾದರೂ, ಈ ತೀರ್ಮಾನ ಹೆಣ್ಣುಮಕ್ಕಳ ಹಿತಾಸಕ್ತಿಗೆ ಧಕ್ಕೆಯಾಗದಂತೆ ಎಚ್ಚರಿಕೆ ವಹಿಸಬೇಕಾಗಿದೆ. ಮಾಹಿತಿ ತಂತ್ರಜ್ಞಾನ ಯುಗದಲ್ಲೂ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿನ ಶೋಷಣೆಯೇನೂ ಕೊನೆಗೊಂಡಿಲ್ಲ.

ವರದಕ್ಷಿಣೆ ಕಿರುಕುಳ ಪ್ರಕರಣಗಳಲ್ಲಿ ಆರೋಪಕ್ಕೆ ಗುರಿಯಾಗುವ ಪುರುಷರ ಕುಟುಂಬದ ಸದಸ್ಯರನ್ನು ದೂರು ದಾಖಲಾದ ತಕ್ಷಣ ಬಂಧಿಸಬಾರದು ಎಂದು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಸ್ವಾಗತಾರ್ಹ. ದೂರಿನ ಕುರಿತು ಕೌಟುಂಬಿಕ ಕ್ಷೇಮಾಭಿವೃದ್ಧಿ ಸಮಿತಿಗಳು ಪರಿಶೀಲಿಸಿದ ನಂತರವಷ್ಟೇ ಬಂಧನದಂಥ ಕ್ರಮಗಳಿಗೆ ಮುಂದಾಗಬೇಕೆಂದು ಕೋರ್ಟ್ ಹೇಳಿದೆ. ಇದಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಸಮಾಜದ ವಿವಿಧ ವರ್ಗಗಳ ಸದಸ್ಯರನ್ನು ಒಳಗೊಂಡ ಸಮಿತಿಗಳನ್ನು ರಚಿಸುವಂತೆಯೂ ತಿಳಿಸಿದೆ. ಈ ನಿರ್ದೇಶನದಿಂದಾಗಿ ವರದಕ್ಷಿಣೆ ಪ್ರಕರಣಗಳನ್ನು ಹೆಚ್ಚು ಮಾನವೀಯವಾಗಿ ಹಾಗೂ ಸಾವಧಾನದಿಂದ ನಿರ್ವಹಿಸಲು ಸಾಧ್ಯವಾಗಲಿದೆ.

ವರದಕ್ಷಿಣೆ ನಿಷೇಧ ಕಾಯ್ದೆ ಅಪಬಳಕೆಯಾಗುತ್ತಿರುವ ಕುರಿತು ಈ ಮೊದಲೂ ಸುಪ್ರೀಂ ಕೋರ್ಟ್ ಆತಂಕ ವ್ಯಕ್ತಪಡಿಸಿತ್ತು. ಗಂಡ ಹಾಗೂ ಗಂಡನ ಮನೆಯವರಿಂದ ಹೆಣ್ಣುಮಕ್ಕಳು ಎದುರಿಸಬಹುದಾದ ವರದಕ್ಷಿಣೆ ಕಿರುಕುಳವನ್ನು ತಡೆಗಟ್ಟುವ ನಿಟ್ಟಿನಿಂದ ರೂಪಿಸಲಾಗಿರುವ 498ಎ ಸೆಕ್ಷನ್ ಕೆಲವೊಂದು ಸಂದರ್ಭಗಳಲ್ಲಿ ದುರುಪಯೋಗವಾಗುತ್ತಿರುವ ದೂರುಗಳ ಹಿನ್ನೆಲೆಯಲ್ಲಿ ಈ ಆತಂಕ ವ್ಯಕ್ತವಾಗಿತ್ತು. ಕೇಂದ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯದ 2016ರ ಅಂಕಿಅಂಶಗಳ ಪ್ರಕಾರ ನೂರರಲ್ಲಿ ಹತ್ತರಿಂದ ಹದಿನೈದು ವರದಕ್ಷಿಣೆ ನಿಷೇಧ ಕಾಯ್ದೆ ಪ್ರಕರಣಗಳು ಸುಳ್ಳಾಗಿರುತ್ತವೆ. ಪ್ರಸ್ತುತ ಭಾರತದಲ್ಲಿ ಜಾರಿಯಲ್ಲಿರುವ ವರದಕ್ಷಿಣೆ ಪ್ರತಿಬಂಧಕ ಕಾಯ್ದೆ 1961ರಷ್ಟು ಹಿಂದಿನದು. ಐದೂವರೆ ದಶಕಗಳಷ್ಟು ಹಳೆಯದಾದ ಈ ಕಾಯ್ದೆಗೆ ತಿದ್ದುಪಡಿ ತರುವ ಚಿಂತನೆ ಕೆಲವು ವರ್ಷಗಳಿಂದ ನಡೆಯುತ್ತಿದ್ದು, ಅದಕ್ಕೀಗ ಪ್ರಸಕ್ತ ಕೋರ್ಟ್ ತೀರ್ಪು ಪೂರಕವಾಗಿದೆ.

ಸುಪ್ರೀಂ ಕೋರ್ಟ್ ನಿರ್ದೇಶನದ ಹಿನ್ನೆಲೆಯಲ್ಲಿ ಕುಟುಂಬಗಳಲ್ಲಿನ ಒಡಕನ್ನು ಸರಿಪಡಿಸುವ ಉದ್ದೇಶವೂ ಇದ್ದಂತಿದೆ. ಬಂಧನದಿಂದಾಗಿ ಎರಡು ಕುಟುಂಬಗಳ ನಡುವಣ ಸಂಧಾನದ ಮಾರ್ಗಗಳು ಮುಚ್ಚಿಹೋಗುತ್ತವೆ. 498ಎ ಕಲಮಿನ ಅನ್ವಯ ಬಂಧನಕ್ಕೊಳಗಾಗುವ ಗಂಡು ಹಾಗೂ ಆತನ ಪೋಷಕರಿಗೆ ಜಾಮೀನು ಕೂಡ ಸಿಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ವಯಸ್ಸಾದ ಪೋಷಕರು ಹಾಗೂ ಅಪ್ರಾಪ್ತ ಎಳೆಯರು ಕೂಡ ಬಂಧನಕ್ಕೊಳಗಾಗಬೇಕಾಗುತ್ತದೆ. ಸುಳ್ಳು ಪ್ರಕರಣಗಳಲ್ಲಿ ಗಂಡಿನ ಕಡೆಯವರು ಅನುಭವಿಸುವ ಮಾನಸಿಕ ವೇದನೆ ಅಸಹನೀಯವಾದುದು. ಆರೋಪಕ್ಕೆ ತುತ್ತಾದವರು ಮಾನಸಿಕ ಆಘಾತಕ್ಕೊಳಗಾಗಿ ಆತ್ಮಹತ್ಯೆ ಮಾಡಿಕೊಂಡ ಉದಾಹರಣೆಗಳೂ ಇವೆ. ಮದುವೆಯಾದ ಮಗಳು ಯಾವ ಕಾರಣಕ್ಕೆ ಸಾವಿಗೀಡಾದರೂ ಮೊದಲು ವ್ಯಕ್ತವಾಗುವುದು ವರದಕ್ಷಿಣೆ ಕುರಿತ ಗುಮಾನಿಯೇ. ಬೇರೆ ಕಾರಣಕ್ಕೆ ಹೆಣ್ಣು ಆತ್ಮಹತ್ಯೆ ಮಾಡಿಕೊಂಡರೂ ಆಕೆಯ ಪೋಷಕರು ಗಂಡಿನ ವಿರುದ್ಧ ವರದಕ್ಷಿಣೆ ನಿಷೇಧ ಕಾಯ್ದೆಯನ್ನು ಅಸ್ತ್ರದಂತೆ ಬಳಸುವುದಿದೆ. ಇಂಥ ಘಟನೆಗಳನ್ನು ತಡೆಯುವ ನಿಟ್ಟಿನಿಂದ ಕೂಡ ಕೋರ್ಟ್ ತೀರ್ಪು ಮಹತ್ವದ್ದಾಗಿದೆ.

ವರದಕ್ಷಿಣೆ ದೌರ್ಜನ್ಯಕ್ಕೆ ಸಂಬಂಧಿಸಿದ ಬಹುತೇಕ ಪ್ರಕರಣಗಳು ತಾರ್ಕಿಕ ಅಂತ್ಯ ತಲುಪುವುದಿಲ್ಲ ಎನ್ನುವುದನ್ನೂ ಗಮನಿಸಬೇಕು. ಹೆಚ್ಚಿನ ಸಂಖ್ಯೆಯ ಪ್ರಕರಣಗಳು ಸಾಕ್ಷ್ಯಾಧಾರಗಳ ಕೊರತೆಯಿಂದ ಬಿದ್ದುಹೋಗುತ್ತವೆ. ವರದಕ್ಷಿಣೆ ಪಡೆಯುವುದನ್ನು ಪ್ರತಿಬಂಧಿಸುವ ಕಾಯ್ದೆ, ವರದಕ್ಷಿಣೆ ನೀಡುವುದನ್ನೂ ವಿರೋಧಿಸುತ್ತದೆ. ಆದರೆ, ಈವರೆಗೆ ವರದಕ್ಷಿಣೆ ಪಡೆದವರು ಕಾನೂನು ಕ್ರಮ ಎದುರಿಸಿದ್ದಾರೆಯೇ ಹೊರತು, ನೀಡಿದವರು ಶಿಕ್ಷೆಗೊಳಗಾದ ಉದಾಹರಣೆಗಳಿಲ್ಲ. ಇದನ್ನು ವಿರೋಧಿಸಿಯೇ ಮುಂಬೈನ ಸತೀಶ್ ಹಾಗೂ ಬೆಂಗಳೂರಿನ ಮಂಜುನಾಥ್ ಎನ್ನುವ ಸಾಫ್ಟ್‌ವೇರ್‌ಎಂಜಿನಿಯರ್‌ಗಳು – ವರದಕ್ಷಿಣೆ ಪಡೆಯುವುದು ಮಾತ್ರವಲ್ಲ, ಅದನ್ನು ಕೊಡುವುದೂ ತಪ್ಪು ಎಂದು ದೂರು ದಾಖಲಿಸಿದ್ದರು. ತಮ್ಮ ವಿರುದ್ಧ ಸುಳ್ಳು ವರದಕ್ಷಿಣೆ ದೂರುಗಳನ್ನು ದಾಖಲಿಸಲಾಗಿದೆ ಎಂದು ಅಳಲು ತೋಡಿಕೊಂಡಿದ್ದ ಅವರು, ಅದೇ ಕಾಯ್ದೆಯನ್ನು ಬಳಸಿಕೊಂಡು ವರದಕ್ಷಿಣೆ ನೀಡಿದ ಹೆಂಡತಿಯ ಪೋಷಕರನ್ನೂ ಶಿಕ್ಷಿಸಬೇಕು ಎಂದು ವಾದ ಹೂಡಿದ್ದಾರೆ. ಕೋರ್ಟ್‌ಗಳಲ್ಲಿರುವ ಆ ಪ್ರಕರಣಗಳಿನ್ನೂ ಇತ್ಯರ್ಥವಾಗಬೇಕಿದೆ.

ವರದಕ್ಷಿಣೆ ನಿಷೇಧ ಕಾಯ್ದೆ ಕುರಿತಂತೆ ಆರೋಪಿತ ಪುರುಷ ಹಾಗೂ ಅವನ ಕುಟುಂಬದ ಬಗ್ಗೆ ಸುಪ್ರೀಂ ಕೋರ್ಟ್ ತಳೆದಿರುವ ನಿಲುವು ಸ್ವಾಗತಾರ್ಹವಾದರೂ, ಈ ತೀರ್ಮಾನ ಹೆಣ್ಣುಮಕ್ಕಳ ಹಿತಾಸಕ್ತಿಗೆ ಧಕ್ಕೆಯಾಗದಂತೆ ಎಚ್ಚರಿಕೆ ವಹಿಸಬೇಕಾಗಿದೆ. ಮಾಹಿತಿ ತಂತ್ರಜ್ಞಾನ ಯುಗದಲ್ಲೂ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿನ ಶೋಷಣೆಯೇನೂ ಕೊನೆಗೊಂಡಿಲ್ಲ. ಭಾರತದಲ್ಲಿ ಪ್ರತಿ ಗಂಟೆಗೊಬ್ಬ ಹೆಣ್ಣು ವರದಕ್ಷಿಣೆ ಪಿಡುಗಿಗೆ ಬಲಿಯಾಗುತ್ತಿದ್ದಾಳೆ. ಕಳೆದ ಮೂರು ವರ್ಷಗಳಲ್ಲಿ ಇಪ್ಪತ್ತೈದು ಸಾವಿರಕ್ಕೂ ಹೆಚ್ಚು ಹೆಣ್ಣುಮಕ್ಕಳು ವರದಕ್ಷಿಣೆ ಕಾರಣದಿಂದಾಗಿ ಕೊಲೆಗೀಡಾಗಿದ್ದಾರೆ ಎನ್ನುವ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋದ ಲೆಕ್ಕಾಚಾರ ಗಾಬರಿ ಹುಟ್ಟಿಸುವಂತಿದೆ. ಹಾಗಾಗಿ, ವರದಕ್ಷಿಣೆ ನಿರ್ಬಂಧ ಮಸೂದೆಯ ಕಾಠಿಣ್ಯವನ್ನು ಸಡಿಲಿಸಿದರೂ ಅದು ದುರ್ಬಲಗೊಳ್ಳದಂತೆ ನೋಡಿಕೊಳ್ಳುವುದು ಅಗತ್ಯ. ಈ ನಿಟ್ಟಿನಲ್ಲಿ ನ್ಯಾಯಾಂಗ–ಶಾಸಕಾಂಗ ಗಮನಹರಿಸುವುದು ಅಗತ್ಯ.

■ ರಘುನಾಥ ಚ.ಹ.

